

# ಗಣೇಶ ಬಂದ

■ ಚಿತ್ರಲೇಖನ

**ದಿಲೀಪ್ ಬ್ಯಾನರ್ಜಿ**

ವಕ್ರತುಂಡ ಮಹಾಕಾಯ... ಕೋಟಿ ಸೂರ್ಯ ಸಮಪ್ರಭ.. ಎಂದು ದಿನ ನಿತ್ಯ ಆರಾಧನೆಗೆ ಒಳಗಾಗುವ 'ಗಣಪತಿ'ಗೆ ಹಿಂದೂ ಧರ್ಮದಲ್ಲಿ ಅಗ್ರ ಸ್ಥಾನ. ಆದ್ದರಿಂದಲೇ ದೇವಾನು ದೇವತೆಗಳ ಗುಂಪಿನ ನಾಯಕ ಸ್ಥಾನ ಅವನಿಗೆ ಸಿದ್ಧಿಸಿದೆ. ಆರಾಧನೆಯಲ್ಲಿಯೂ ಕೂಡ ಮೊದಲ ಆದ್ಯತೆ ನೀಡಲಾಗುತ್ತಿದೆ. ಜಾತಿ ಭೇದಗಳಿಲ್ಲದೆ ದೇಶವ್ಯಾಪಿ ಪೂಜೆಗೆ ಅರ್ಹನಾಗುವ ಗಣೇಶನ ಮಹಿಮೆ ಅಪಾರ. ವಿಘ್ನಗಳನ್ನು ನಿವಾರಣೆ ಮಾಡಿ, ಎಲ್ಲ ಕೆಲಸ ಕಾರ್ಯಗಳನ್ನು ಯಶಸ್ಸನು ದಯಪಾಲಿಸುವವ ವರಮಹಾಗಣಪತಿ. ಈ ಕಾರಣಕ್ಕಾಗಿಯೇ ಆತನನ್ನು ಬೀದಿ ಬೀದಿ, ಊರು– ಕೇರಿಗಳಲ್ಲಿ ಸಾರ್ವತ್ರಿಕವಾಗಿ ಪೂಜಿಸಿ ಸಾಂಸ್ಕೃತಿಕ ವಾತಾವರಣ ನಿರ್ಮಿಸುವ ಸಂಪ್ರದಾಯ ಈಗಲೂ ಉಳಿದಿದೆ.

ಬ್ರಹ್ಮ, ವಿಷ್ಣು, ಮಹೇಶ್ವರ ದೇವಲೋಕದ 'ತ್ರಿಮೂರ್ತಿ'ಗಳು ಎನಿಸಿಕೊಂಡಿದ್ದರೂ, ಹಿಂದೂ ಧರ್ಮೀಯರು ಮೊದಲು ಪೂಜೆ ಸಲ್ಲಿಸುವುದು ಗಣೇಶನಿಗೆ. ಆ ನಂತರದ ಸ್ಥಾನವನ್ನು ಸೂರ್ಯ, ವಿಷ್ಣು, ಶಿವ, ದುರ್ಗಾ ಹೀಗೆ ಕ್ರಮವಾಗಿ ಬೇರೆ ಬೇರೆ ದೇವರಿಗೆ ಕಲ್ಪಿಸಲಾಗಿದೆ. ದೇವ ಗಣದಲ್ಲಿಯೇ ಅತ್ಯಂತ ಜನಪ್ರಿಯ ದೇವರೆಂದರೆ ಗಣಪತಿ ಮತ್ತು ಶಿವ. ಇವರನ್ನು ಬಹುತೇಕರು ವಿವಿಧ ರೂಪದಲ್ಲಿ ಆರಾಧಿಸುತ್ತಾರೆ. ಗಣೇಶನ ಬಗ್ಗೆ ಅನೇಕ ಪೌರಾಣಿಕ ಕತೆಗಳನ್ನು ವಿವಿಧ ಸಂಸ್ಕೃತಿಯ ಜನರು ಹೇಳುತ್ತಾರೆ.

ಮಹಾಭಾರತದಲ್ಲಿ ಒಂದೆಡೆ ಗಣೇಶಗೆ ರುದ್ರ ಅವತಾರಿಯ ಸ್ಥಾನವನ್ನು ನೀಡಲಾಗಿದೆ. ಆದರೆ ಶಿವನ ಮಗನೇ ಗಣಪತಿ. ರುದ್ರನ ರೂಪವನ್ನು ಶಿವ ಅವತರಿಸಿದ್ದ ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಪಾರ್ವತಿಯ ಇಷ್ಟಾನುಸಾರ ಗಣೇಶ ಜನ್ಮ ತಾಳುತ್ತಾನೆ. ಶಿವನ ಇಚ್ಛೆಯಂತೆ ಗಣೇಶ ಜೀವವೆತ್ತ ಎಂಬ ನಂಬಿಕೆಯೂ ಕೆಲ ರಾಜ್ಯಗಳಲ್ಲಿ ಈಗಲೂ ಇದೆ. ಆದರೆ ಎಲ್ಲರೂ ಆತನನ್ನು ಗಜವದನ ಎಂದು ಆರಾಧಿಸುತ್ತಾರೆ.

(8ನೇ ಪುಟ ನೋಡಿ)

